## ಒಂದೇ ದಿನ ಮದುವೆ

ಎಂದಿನಂತೆ ಅಂದು ಸಂಜೆ ರಾಯರು ವಾಕಿಂಗ್‌ಗೆ ಹೊರಟಿದ್ದರು. ದಾರಿಯಲ್ಲಿ ಸಿಕ್ಕ ಗುಂಡ, 'ನಮಸ್ಕಾರ ರಾಯರೇ, ಹೇಗಿದ್ದೀರಾ?' ಎಂದ. 'ಚೆನ್ನಾಗಿದ್ದೀನಿ, ನೀನು ಹೇಗಿದ್ದಿಯ?' ಎಂದರು ರಾಯರು. 'ಚೆನ್ನಾಗಿದ್ದೀನಿ, ಮುಂದಿನ ತಿಂಗಳು ಒಂದನೇ ತಾರೀಖು ನನ್ನದೂ, ಎದುರು ಮನೆ ಮಮತಾಳದೂ ಮದುವೆ. ನಿಮ್ಮ ಆಶೀರ್ವಾದ ಬೇಕು' ಎಂದ. 'ಹೌದಾ, ತುಂಬಾ ಸಂತೋಷ. ನೀವಿಬ್ಬರೂ ತುಂಬಾ ವರ್ಷಗಳಿಂದ ಪ್ರೀತಿಸ್ತಾ ಇದ್ರಲ್ಲ... ಅಂತೂ ಕೊನೆಗೆ ಮದ್ವೆ ಆಗ್ತಾ ಇದ್ದೀರಿ, ಒಳ್ಳೆಯದಾಗಲಿ. ಖಂಡಿತಾ ಬರ್ತೀನಿ. ಅಂದಹಾಗೆ ಮದುವೆ ಎಲ್ಲಿ?' ಎಂದರು. 'ನನ್ನ ಮದುವೆ ಬೆಂಗಳೂರಿನಲ್ಲಿ, ಮಮತಾಳ ಮದುವೆ ಮೈಸೂರಿನಲ್ಲಿ. ಇಬ್ಬರೂ ಒಂದೇ ದಿನ ಮದುವೆ ಆಗ್ತಾ ಇದ್ದೀವಿ' ಎಂದ.

**ಎಂ.ಕೆ. ಮಂಜುನಾಥ್**







## ಊಟ ಎಷ್ಟು ಗಂಟೆಗೆ?

ಗುಂಡ ಮತ್ತು ಪಾಂಡು ಗೆಳೆಯರು. ವಾರಕ್ಕೊಮ್ಮೆ ಭೇಟಿಯಾಗುತ್ತಿದ್ದರು. ಆ ಭಾನುವಾರ ಹೀಗೇ ಮಾತಾಡುತ್ತ ಕುಳಿತಿರುವಾಗ ಗ್ರಹಣದ ವಿಷಯ ಬಂತು. ಪಾಂಡು ಕೇಳಿದ: 'ಚಂದ್ರಗ್ರಹಣವಾಗಲಿ, ಸೂರ್ಯಗ್ರಹಣವಾಗಲಿ, ಮೊದಲು ನೋಡುವುದು ಏನು?' ಗುಂಡ ತಕ್ಷಣ ಹೇಳಿದ: 'ಊಟ ಎಷ್ಟು ಗಂಟೆಗೆ?'

**ವಿದ್ಯಾ ಎನ್. ಪೈ**